www.ecourtsindia.com



C.C No.:2398/2021
CW: 03 PW: 04

**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಸೊರಬ**

ಹೆಸರು :- ಶ್ರೀ ಶಿವರಾಜ್ ಕುಮಾರ್.

ತಂದೆಯ ಹೆಸರು :- ಶ್ರೀ ಶಣ್ಮುಗಗೌಡ ದೊಡ್ಡಮನಿ.

ವಯಸ್ಸು :- ೩೨ ವರ್ಷ

ಉದ್ಯೋಗ :- ಕೂಲಿ ಕೆಲಸ.

ಸ್ಥಳ :- ಹಳ್ಳಿಬೈಲು ಗ್ರಾಮ, ಹಾನಗಲ್ ತಾಲ್ಲೂಕು.

ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಮಾಡಿಸಲಾಯಿತು. ದಿನಾಂಕ: 12.06.2023.

**ಮುಖ್ಯ ವಿಚಾರಣೆ : ಮಾನ್ಯ ಸ. ಸ. ಅ. ರವರಿಂದ**

1. ನನಗೆ ಮೃತ ಅಣ್ಣಪ್ಪ ಬಿನ್ ಶಿವಪ್ಪ ರವರ ಮುಖ ಪರಿಚಯ ಇರುತ್ತದೆ. ಸದರಿಯವರಿಗೆ ಒಂದು ವರ್ಷದ ಹಿಂದೆ ರಸ್ತೆ ಅಪಘಾತವಾಗಿರುತ್ತದೆ ಎಂದು ನನಗೆ ತಿಳಿದು ಬಂದಿರುತ್ತದೆ. ಸದರಿ ಅಪಘಾತದ ಬಗ್ಗೆ ಜನರು ಮಾತನಾಡುತ್ತಿದ್ದು ನಾನು ಸೊರಬ ಆಸ್ಪತ್ರೆಗೆ ಹೋದಾಗ ಸದರಿ ಅಣ್ಣಪ್ಪ ರವರಿಗೆ ಅಪಘಾತವಾಗಿರುತ್ತದೆ ಎಂದು ಗೊತ್ತಾಗಿರುತ್ತದೆ. ಸದರಿ ಅಣ್ಣಪ್ಪ ರವರು ಸೊರಬ ಆಸ್ಪತ್ರೆಯಿಂದ ಹೆಚ್ಚಿನ ಚಿಕಿತ್ಸೆಗಾಗಿ ಶಿರಾಳಕೊಪ್ಪಕ್ಕೆ ಕರೆದುಕೊಂಡು ಹೋಗುವ ಮಾರ್ಗ ಮಧ್ಯೇ ಅಣ್ಣಪ್ಪ ರವರು ಮೃತಪಟ್ಟಿರುತ್ತಾರೆ. ನಾನು ಅಪಘಾತದ ಸಂಬಂಧ ತನಿಖಾಧಿಕಾರಿಗಳ ಮುಂದೆ ಹೇಳಿಕೆ ನೀಡಿರುವುದಿಲ್ಲ. ನ್ಯಾಯಾಲಯದ ಮುಂದೆ ಇರುವ ಆರೋಪಿ ಬಸ್ ಚಾಲಕನಾಗಿದ್ದು ನಮ್ಮ ಊರಿನಲ್ಲಿ ನೋಡಿರುತ್ತೇನೆ.

(ಈ ಹಂತದಲ್ಲಿ ಮಾನ್ಯ ಸ.ಸ.ಅ. ರವರು ಸಾಕ್ಷಿಯು ಅಭಿಯೋಜನಾ ಪ್ರಕರಣಕ್ಕೆ ಪ್ರತಿಕೂಲ ಸಾಕ್ಷಿ ನುಡಿದ ಕಾರಣ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು, ಸಾಕ್ಷಿಯು ಅಭಿಯೋಜನಾ ಪ್ರಕರಣಕ್ಕೆ ವ್ಯತಿರಿಕ್ತವಾಗಿ ಸಾಕ್ಷಿ ನುಡಿದ ಕಾರಣ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು.)

**ಪಾಟೀಸವಾಲು : ಮಾನ್ಯ ಸ ಸ ಅ ರವರಿಂದ:**

2. ದಿನಾಂಕ 03.09.2021 ರಂದು ನಾನು ನನ್ನ ಕೆಲಸದ ನಿಮಿತ್ತ ಆನವಟ್ಟಿಗೆ ಹೋಗಿ ನಮ್ಮ ಗ್ರಾಮಕ್ಕೆ ಬರುತ್ತಿರುವಾಗ ಸಂಜೆ 7.20 ಗಂಟೆಗೆ ಆನವಟ್ಟಿ ಹಾನಗಲ್

This is a True Copy of the Court Records Online. Authenticated @ districts.ecourtsindia.com/cnr/KASM700037532021/truecopy/order-4.pdf

ರಸ್ತೆಯ ಕೆಟಬೈರೇಶ್ವರ ದೇವಸ್ಥಾನದ ಎದುರಿನ ಟಾರ್ ರಸ್ತೆಯಲ್ಲಿ ಆರೋಪಿ ವಿಜಯಾ ಮೋಟಾರ್ ಗೆ ಸಂಬಂಧಪಟ್ಟ ಬಸ್ ಅನ್ನು ಅಜಾಗರೂಕತೆಯಿಂದ ಮತ್ತು ನಿರ್ಲಕ್ಷ್ಯತನದಿಂದ ಚಲಾಯಿಸಿಕೊಂಡು ಹೋಗಿ ಸದರಿ ಬಸ್ ನ ಹಿಂಬದಿಯಲ್ಲಿ ಅಣ್ಣಪ್ಪ ರವರು ಚಲಾಯಿಸಿಕೊಂಡು ಬರುತ್ತಿದ್ದ ಬೈಕ್ ಅನ್ನು ಗಮನಿಸದೇ ಸದರಿ ಬಸ್ ಅನ್ನು ಒಮ್ಮೆಲೆ ಎಡಬದಿಗೆ ಇಂಡಿಕೇಟರ್ ಹಾಕದೇ ತಿರುಗಿಸಿದಾಗ ಸದರಿ ಬಸ್ ನ ಬದ ಬದಿಯ ಭಾಗ ಬೈಕ್ ಗೆ ಡಿಕ್ಕಿ ಪಡಿಸಿ ಅಪಘಾತವಾಗಿರುತ್ತದೆ ಎಂದರೆ ನಾನು ನೋಡಿರುವುದಿಲ್ಲ. ನಾನು ತಿನಿಖಾಧಿಕಾರಿಗಳ ಮುಂದೆ ನಾನು ಮೇಲ್ಕಂಡ ವಿಳಾಸದಲ್ಲಿ ವಾಸವಾಗಿರುತ್ತೇನೆ................................. ಶಿರಾಳಕೊಪ್ಪ ಸರ್ಕಾರಿ ಆಸ್ಪತ್ರೆಯಲ್ಲಿ ಪರೀಕ್ಷಿಸಿದ ವೈದ್ಯರು ಅಣ್ಣಪ್ಪ ರವರು ಮೃತಪಟ್ಟಿರುವ ಬಗ್ಗೆ ಖಚಿತಪಡಿಸಿರುತ್ತಾರೆ ಎಂದು ಈಗ ಓದಿ ಹೇಳಿದಂತೆ ಹೇಳಿಕೆ ನೀಡಿರುತ್ತೇನ ಎಂದರೆ ಸುಳ್ಳು. ಸದರಿ ಹೇಳಿಕೆಯನ್ನು ನಿಪಿ 7 ಎಂದು ಗುರುತಿಸಲಾಯಿತು. ನನಗೆ ಅಪಘಾತದ ಬಗ್ಗೆ ಗೊತ್ತಿದ್ದರೂ, ನಿಪಿ 7 ರಂತೆ ಹೇಳಿಕೆ ನೀಡಿದ್ದರೂ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸುಳ್ಳು.

ಪಾಟೀ ಸವಾಲು : ಆರೋಪಿ ಪರ ಶ್ರೀ ಎಸ್ ಪಿ ಎನ್ ವಕೀಲರಿಂದಃ ಇಲ್ಲ ಎಂದು ನುಡಿದಿರುತ್ತಾರೆ.

**ಮರುವಿಚಾರಣೆಃ ಇಲ್ಲ.**

**(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದ ರೀತ್ಯಾ ಕಂಪ್ಯೂಟರೀಕರಿ ಸಲಾಯ್ತು).**

**ಓದಿ, ಹೇಳಿ, ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ.**

**C/c** ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿಃ
ಸೊರಬ.

This is a True Copy of the Court Records Online. Authenticated @ districts.ecourtsindia.com/cnr/KASM700037532021/truecopy/order-4.pdf